## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s Bijapur Renewable Energy India Private Limited ಕಂಪನಿಯವರಿಗೆ ಬಳ್ಳಾರಿ ಜಿಲ್ಲೆ, ಕೊಟ್ಟೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 35.3 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರಿ ಆದೇಶ ಸಂಖ್ಯೆ:ಇಎನ್ 638 ಎನ್‌ಸಿಇ 2018, ದಿನಾಂಕ: 24.12.2019.
2) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಎನರ್ಜಿ 185 ಎನ್‌ಸಿಇ 2020, ದಿನಾಂಕ:09.10.2020
3) ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 245 ಎನ್‌ಸಿಇ 2020, ದಿನಾಂಕ: 24.12.2020.
4) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಎನರ್ಜಿ 65 ಎನ್‌ಸಿಇ 2021, ದಿನಾಂಕ:05.04.2021
5) ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 239 ಎನ್‌ಸಿಇ 2021, ದಿನಾಂಕ: 28.10.2021.
6) ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/08/BREIPL 30 to 35.3 MW/M(2)/F-90(2021)/09, ದಿನಾಂಕ:01.01.2022.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ M/s Bijapur Renewable Energy India Private Limited ಕಂಪನಿಯವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ, ಎರಮಲ್ಲನಹಳ್ಳಿ ಮತ್ತು ನಿಂಬಲಗಿರಿ ಗ್ರಾಮಗಳಲ್ಲಿ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ತಿದ್ದುಪಡಿ ಆದೇಶದನ್ವಯ ಸದರಿ ಯೋಜನೆಯ ಅಕ್ಷಾಂಶ ಮತ್ತು ರೇಖಾಂಶಗಳನ್ನು ಮಾರ್ಪಡಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ M/s Bijapur Renewable Energy India Private Limited ಕಂಪನಿಯವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ, ಎರಮಲ್ಲನಹಳ್ಳಿ ಮತ್ತು ನಿಂಬಲಗಿರಿ ಗ್ರಾಮಗಳಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ತಾಂತ್ರಿಕ ಮಾಹಿತಿಯಲ್ಲಿ ಕೆಲವೊಂದು ತಿದ್ದುಪಡಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ M/s Bijapur Renewable Energy India Private Limited ಕಂಪನಿಯವರಿಗೆ ಬಳ್ಳಾರಿ ಜಿಲ್ಲೆಯ, ಕೊಟ್ಟೂರು ತಾಲ್ಲೂಕಿನ ಎರಮಲ್ಲನಹಳ್ಳಿ ಮತ್ತು ನಿಂಬಲಗಿರಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 30 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Bijapur Renewable Energy India Private Limited ಕಂಪನಿಯವರಿಗೆ ಹಂಚಿಕೆಯಾಗಿರುವ 30 ಮೆ.ವ್ಯಾ. ಸಾಮರ್ಥ್ಯವನ್ನು 35.3 ಮೆ.ವ್ಯಾ. ಗೆ ಹೆಚ್ಚಿಸುವಂತೆ ಅಭಿವೃದ್ಧಿದಾರರು ಕೋರಿದ್ದು, ಈ ಸಂಬಂಧ 5.3 ಮೆ.ವ್ಯಾ. ಸಾಮರ್ಥ್ಯಕ್ಕೆ ಅರ್ಜಿ ಮತ್ತು ಡಿಪಿಆರ್ ಶುಲ್ಕವನ್ನು ಪಾವತಿಸಿರುವುದಾಗಿ ಹಾಗೂ ಕಂಪನಿಯು ನಿಗದಿತ ನೆಟ್‌ವರ್ತ್ ಹೊಂದಿರುವುದರಿಂದ M/s Bijapur Renewable Energy India Private Limited ಕಂಪನಿಯವರಿಗೆ

...2

ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ, ಎರಮಲ್ಲನಹಳ್ಳಿ ಮತ್ತು ನಿಂಬಲಗಿರಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾ ಸಾಮರ್ಥ್ಯವನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವುದಕ್ಕಾಗಿ 35.3 ಮೆ.ವ್ಯಾ.ಗಳಿಗೆ ಹೆಚ್ಚಿಸುವ ಹಾಗೂ ಸದರಿ ಕಂಪನಿಯವರು ಟೋಪೋಶೀಟ್ ಸಂಖ್ಯೆ:57 B/6 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ 17 ಸಂಖ್ಯೆಯ ವಿಂಡ್ ಟರ್ಬೈನ್ ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ ಒಟ್ಟು 68 ಎಕರೆ (17 WTGs x 4 Acres=68 acres) ಜಮೀನನ್ನು ಉಪಯೋಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 22 ಎನ್‌ಸಿಇ 2022,**
**ಬೆಂಗಳೂರು, ದಿನಾಂಕ:14.01.2022**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ M/s Bijapur Renewable Energy India Private Limited ಕಂಪನಿಯವರಿಗೆ ಬಳ್ಳಾರಿ ಜಿಲ್ಲೆಯ, ಕೊಟ್ಟೂರು ತಾಲ್ಲೂಕಿನ ಎರಮಲ್ಲನಹಳ್ಳಿ ಮತ್ತು ನಿಂಬಲಗಿರಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 30 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 35.3 ಮೆ.ವ್ಯಾ. ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತುಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Geographical area description for 35.3 MW capacity wind power project of M/s Bijapur Renewable Energy India Private Limited**

| Sl No | Geographical area description of the project | Near by villages of the proposed area & District | Existing capacity in MW | Capacity enhancement in MW | Total capacity in MW |
|---|---|---|---|---|---|
| 1 | The identified area is covered in private land Nimbalagiri and Erramallanahalli villages. The area is having several peaks and is covered in the following Geographical co-ordinates as:<br><br>**A**: Lat:14°40'47.74"N, Long:76°20'37.06"E<br>**B**:Late:14°41'3.80"N, Long:76°20'37.14"E<br>**C**:Lat:14°41'52.54"N, Long:76°21'40.68"E<br>**D**:Lat:14°44'57.27"N, Long:76°15'31.92"E<br>**E**:Lat:14°41'53.77"N, Long:76°23'15.57"E<br>**F**:Lat:14°41'1.75"N, Long:76°23'20.47"E<br>**G**:Lat:14°40'31.11"N, Long:76°22'41.48"E<br><br>Ridge Peaks:657 and 656m AMSL<br>Toposheet No:57 B/6 | Erramallanahalli & Nimbalagiri Villages of Kotturu Taluk, Ballari District | 30 MW | 5.3 MW | 35.3 MW (16 Nos x 2000 kW) & (1 No. X 3300 kW) |